- ಆಕರ್ಷಕ ಮುಖಪುಟದ ಆಗಸ್ಟ್ ಸಂಚಿಕೆ ಮನಸೆಳೆಯಿತು. ಕಲಾವಿದ–ಲೇಖಕ ಕೆ.ವಿ. ಸುಬ್ರಹ್ಮಣ್ಯಂ ಅವರೊದಿಗಿನ ಸಂವಾದ (ಸಂದರ್ಶನ: ದೇವು ಪತ್ತಾರ) ಯುವ ಕಲಾವಿದರಿಗೆ ದಾರಿದೀಪದಂತಿದೆ. ಅನುವಾದಿತ ಕತೆ 'ನಲ್ಮೆಯ ಮುದುಕಿ' (ಮೂಲ: ರೊಆಲ್ಡ್ ದಾಹ್ಲ್ ಕನ್ನಡಕ್ಕೆ: ಜೆ.ವಿ. ಕಾರ್ಲೊ) ಅಚ್ಚರಿಯನ್ನುಂಟು ಮಾಡಿತು.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ನನ್ನ ಸಂದರ್ಶನದಲ್ಲಿ, 'ಪಶ್ಚಿಮದ ಫ್ಯೂಚರಿಸ್ಟ್ ಕಲಾವಿದರ ದೃಷ್ಟಿಯೇ ಹಳೆಯದೆಲ್ಲವನ್ನೂ ಮ್ಯೂಸಿಯಂ ಇತ್ಯಾದಿಗಳನ್ನೂ ಮಾಡಿ ಎಂಬಂಥದು.' ಎಂಬ ವಾಕ್ಯವನ್ನು 'ಪಶ್ಚಿಮದ ಫ್ಯೂಚರಿಸ್ಟ್ ಕಲಾವಿದರ ದೃಷ್ಟಿಯೇ ಹಳೆಯದೆಲ್ಲವನ್ನೂ ಮ್ಯೂಸಿಯಂ ಇತ್ಯಾದಿಗಳನ್ನೂ ನಾಶ ಮಾಡಿ ಎಂಬಂಥದು.' (ಪು.16, 'ಪಾಶ್ಚಾತ್ಯ ಕಲೆಯಲ್ಲಿ...' ಎಂಬ ಪ್ರಶ್ನೆಯ ಉತ್ತರ) ಎಂದು ಓದಿಕೊಳ್ಳಬೇಕಾಗಿ ವಿನಂತಿ.

**ಕೆ.ವಿ. ಸುಬ್ರಮಣ್ಯಂ, ಬೆಂಗಳೂರು**

- ಸಂಪಾದಕೀಯ 'ಪತ್ರಿಕಾ ಲೇಖಕರ ನೀತಿಸಂಹಿತೆ' ಸಮಯೋಚಿತ. ಲೇಖಕರು ಸಂಪಾದಕೀಯದ ಆಶಯವನ್ನು ಅರ್ಥಮಾಡಿಕೊಳ್ಳಬೇಕಿದೆ.

**ಮಂಜುಳ ಪ್ರೇಂಕುಮಾರ್, ಬೆಂಗಳೂರು,**
**ವೀಣಾ ಜೋಶಿ, ಬಾರ್ಕೂರು**

- ಎಚ್. ಡುಂಡಿರಾಜ್ ಅವರ ಮಕ್ಕಳ ಕವಿತೆಗಳು ಹಾಗೂ ಜಯಂತ ಕಾಯ್ಕಿಣಿ ಅವರ ಕವಿತೆಗಳು ಇಷ್ಟವಾದವು.

**ಕೊಟ್ರೇಶ ಅಕ್ಕಿ, ಉಪನಾಯಕನಹಳ್ಳಿ**

- ಜಯಂತ ಕಾಯ್ಕಿಣಿ ಹಾಗೂ ನಾಗರಾಜ ಕಾಂಬಳೆ ಅವರ ಕವಿತೆಗಳು ಆಪ್ತವಾಗಿವೆ.

**ಮಂಜುನಾಥ ನಾಯ್ಕ, ಯಲ್ವಡಿಕವೂರ,**
**ಶಾಂತಲಾ ರಾಜಗೋಪಾಲ್, ಬೆಂಗಳೂರು**




- ವಸುಮತಿ ಉಡುಪ ಅವರ 'ಮಡಿ' ಕತೆಯ ವಿಧವೆಯಾಗಿರುವ ನಾಯಕಿಗೆ 'ಮಡಿ'ವಂತರ ಮನೆಯಲ್ಲಿ ಕೆಲಸ ಮಾಡಿ ಬದುಕು ಕಟ್ಟಿಕೊಳ್ಳುವಾಸೆ. ಮುಟ್ಟಾಗಿ ಹೊರಕೂತರೆ ಮನೆಯವರಿಗೆ ಕಷ್ಟವಾಗುತ್ತದೆಂದು ತನ್ನ ಗರ್ಭಕೋಶವನ್ನು ಆಕೆ ತೆಗೆಸುತ್ತಾಳೆ. ಬಡವರನ್ನು, ಅಸಹಾಯಕರನ್ನು 'ಮಡಿ'ವಂತರ ಸೇವೆಗೆಂದೇ ದೇವರು ಸೃಷ್ಟಿಸಿದ್ದಾನೆಂದು ನಂಬುವ, ಅದನ್ನು ಹಕ್ಕಿನಂತೆ ಪ್ರತಿಪಾದಿಸುವ, 'ಮಡಿ'ವಂತರ ಜೀವವಿರೋಧಿ ಧೋರಣೆ ಕತೆಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಲ್ಪಟ್ಟಿದೆ.

**ನಾಗಮಣಿ ಎಸ್.ಎನ್., ಬೆಂಗಳೂರು**

- 'ಮಡಿ' ಕತೆ ಓದಿ ಮನ ಮಿಡಿಯಿತು, ಕಣ್ಣು ಹನಿಗೂಡಿತು.

**ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ,**
**ಸುಶೀಲಾ ರಾವ್, ಉಡುಪಿ**